ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 16.07.2024

**ಸುತ್ತೋಲೆ**

ವಿಷಯ: ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಫಲಿತಾಂಶದಲ್ಲಿ ಆಂತರಿಕ ಅಂಕಗಳು ಪ್ರಕಟವಾಗದಿದ್ದಲ್ಲಿ ಮಂಡಳಿಯಲ್ಲಿ Update ಮಾಡಲು ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.04.2015

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ವಿದ್ಯಾರ್ಥಿಗಳ ಪ್ರಕಟಿತ ಫಲಿತಾಂಶವನ್ನು ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರುಗಳು ಮತ್ತು ವಿಭಾಗಾಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ, ಫಲಿತಾಂಶಗಳಲ್ಲಿ ಸಂಸ್ಥೆಗಳ ಲೋಪದಿಂದ ಯಾವುದೇ ವಿದ್ಯಾರ್ಥಿ/ಗಳ ಆಂತರಿಕ ಅಂಕಗಳು ಫಲಿತಾಂಶದಲ್ಲಿ ಪ್ರತಿಬಿಂಬಿತವಾಗಿಲ್ಲದಿದ್ದ ಪಕ್ಷದಲ್ಲಿ ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಂಡಳಿಯಲ್ಲಿ Update ಮಾಡಲು ಸಂಸ್ಥೆಯ ಪ್ರಾಚಾರ್ಯರಿಂದ ವಿವರವಾದ ಲಿಖಿತ ಪತ್ರ ಮತ್ತು ಈ ಕೆಳಕಂಡ ಮೂಲ & ದೃಢೀಕೃತ ದಾಖಲೆಗಳೊಂದಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

1. ಸಂಸ್ಥೆಯ ಪ್ರಾಂಶುಪಾಲರಿಂದ ಪ್ರತಿ ವಿದ್ಯಾರ್ಥಿಯ ಫಲಿತಾಂಶದ ವಿವರಗಳನ್ನೊಳಗೊಂಡ ಲಿಖಿತ ಪತ್ರವನ್ನು ಪ್ರತಿ ವಿದ್ಯಾರ್ಥಿಗೆ ಒಂದು ಪತ್ರದಂತೆ ಸಲ್ಲಿಸುವುದು.
2. ಸಂಸ್ಥೆಯ ಪ್ರಾಂಶುಪಾಲರಿಂದ ದೃಢೀಕೃತಗೊಂಡ ಸಂಬಂಧಪಟ್ಟ ವಿದ್ಯಾರ್ಥಿಯ ATS ಶೀಟ್ ನ ಪ್ರತಿ.
3. ಪ್ರಾಂಶುಪಾಲರಿಂದ ದೃಢೀಕೃತಗೊಂಡ, ಸಂಬಂಧಪಟ್ಟ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಯು ಶುಲ್ಕ ಪಾವತಿಸಿರುವ ಚಲನ್ ಪ್ರತಿ
4. ಪ್ರಾಂಶುಪಾಲರಿಂದ ದೃಢೀಕರಿಸಿದ ಸಂಬಂಧಪಟ್ಟ ವಿದ್ಯಾರ್ಥಿಯ ಪ್ರವೇಶ ಪತ್ರದ ಪ್ರತಿ.
5. **ಸಂಸ್ಥೆಯ ಮೂಲ ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್‌ಲಿಸ್ಟ್:** ರಿಜಿಸ್ಟರ್‌ನಲ್ಲಿನ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರಬೇಕು ಹಾಗೂ ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ಪ್ರಿನ್ಸಿಪಾಲರು & ಆಂತರಿಕ ಅಂಕಗಳ ಪರಿವೀಕ್ಷಕರು ಈ ಕಛೇರಿ ಜ್ಞಾಪನದಲ್ಲಿ ಸೂಚಿಸಿರುವಂತೆ ದೃಢೀಕರಿಸಿರಬೇಕು.
6. ಫಲಿತಾಂಶದಲ್ಲಿ ಆಂತರಿಕ ಅಂಕಗಳು ಪ್ರತಿಬಿಂಬಿತವಾಗಿಲ್ಲದ ವಿದ್ಯಾರ್ಥಿಯ ಸೆಮಿಸ್ಟರ್‌ನ ಆಂತರಿಕ ಅಂಕಗಳ ಮೂಲ ವಹಿಯ ದೃಢೀಕೃತ ಫೋಟೊ ಪ್ರತಿ (ಪೂರ್ಣ ಸೆಮಿಸ್ಟರ್‌ನ ದೃಢೀಕೃತ ಪ್ರತಿ) ಮತ್ತು ಚೆಕ್‌ಲಿಸ್ಟ್‌ನ ದೃಢೀಕೃತ ಪ್ರತಿಗಳನ್ನು ಪತ್ರದೊಂದಿಗೆ ಲಗತ್ತಿಸುವುದು.

ಆಂತರಿಕ ಅಂಕಗಳನ್ನು/ಅಭ್ಯರ್ಥಿಗಳ ಪಟ್ಟಿಯನ್ನು ಸರಿಯಾಗಿ Upload ಮಾಡದೆ ಲೋಪವೆಸಗಿದ್ದಲ್ಲಿ ಉಲ್ಲೇಖದ ಸರ್ಕಾರಿ ಆದೇಶದ ಪ್ರಕಾರ K2 ಮುಖಾಂತರ ನಿಗದಿತ ದಂಡ ಪಾವತಿಸಿ ಚಲನ್ ಪ್ರತಿಯನ್ನು ಮಂಡಳಿಗೆ ಸಲ್ಲಿಸುವುದು.

ಕಾರ್ಯದರ್ಶಿ

ಇವರಿಗೆ,
ರಾಜ್ಯದಲ್ಲಿನ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಉಪನಿರ್ದೇಶಕರು, ತಾಂ.ಪಂ.ಮಂ. – ಮಾಹಿತಿಗಾಗಿ
2. ಸಹಾಯಕ ನಿರ್ದೇಶಕರು, ತಾಂ.ಪಂ.ಮಂ. – ಮಾಹಿತಿಗಾಗಿ
3. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ (ಸ) ಪಾಲಿಟೆಕ್ನಿಕ್, ಮಂಗಳೂರು– ಮಾಹಿತಿಗಾಗಿ
4. ಹಿರಿಯ ತಾಂತ್ರಿಕ ಸಹಾಯಕರುಗಳು/ ತಾಂತ್ರಿಕ ಸಹಾಯಕರುಗಳು ತಾಂ.ಪಂ.ಮಂ.–ಮಾಹಿತಿ & ಅಗತ್ಯಕ್ರಮಕ್ಕಾಗಿ
5. ರಿಜಿಸ್ಟ್ರಾರ್ (ಪರೀಕ್ಷೆ) ತಾಂ.ಪಂ.ಮಂ. – ಮಾಹಿತಿಗಾಗಿ
6. ಆರ್.ಡಿ.ಎಂ. ವಿಭಾಗದ ಕಛೇರಿ ಅಧೀಕ್ಷಕರುಗಳು ಮತ್ತು ಕಾರ್ಯ ನಿರ್ವಾಹಕರುಗಳಿಗೆ –ಮಾಹಿತಿ& ಅಗತ್ಯಕ್ರಮಕ್ಕಾಗಿ
7. ಇ-ಆಡಳಿತ – ವೆಬ್ ಸೈಟ್‌ನಲ್ಲಿ ಪ್ರಕಟಿಸಲು 8. ಗಣಕ ಕೇಂದ್ರ– ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲು